**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ :- ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ:ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮವು ನಿರ್ವಹಿಸುತ್ತಿರುವ ಪಿ.ಡಿ. ಖಾತೆಯನ್ನು ಖಜಾನೆ-2 ರ State PFMS Module ವರ್ಗಾಯಿಸಿ **ಮೈಕ್ರೋ ಕ್ರೆಡಿಟ್ ಪ್ರೇರಣಾ ಯೋಜನೆ**ಯಡಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಬಗ್ಗೆ.

ಉಲ್ಲೇಖ:-
1. ಸರ್ಕಾರದ ಆದೇಶದ ಸಂಖ್ಯೆ: ಸಕಇ 301 ಎಸ್‌ಡಿಸಿ 2018 ಬೆಂಗಳೂರು ದಿನಾಂಕ: 21.02.2019 ಮತ್ತು ಸಕಇ 288 ಎಸ್‌ಡಿಸಿ 2022 ಬೆಂಗಳೂರು ದಿನಾಂಕ: 29.10.2023. ಹಾಗೂ ಸಕಇ 151 ಎಸ್‌ಡಿಸಿ 2025 ಬೆಂಗಳೂರು ದಿನಾಂಕ:16.06.2025
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆರವರ ಪತ್ರ ಸಂಖ್ಯೆ: FD265FR2024 ದಿನಾಂಕ:04.06.2025.
3. ಮಾನ್ಯ ಆಯುಕ್ತರು, ಖಜಾನೆ ಇಲಾಖೆ, ಬೆಂಗಳೂರುರವರ ಪತ್ರ ಸಂಖ್ಯೆ:DOT /OTHROMIS/16/2024 ದಿನಾಂಕ:21.06.2025.
4. ವ್ಯವಸ್ಥಾಪಕ ನಿರ್ದೇಶಕರು, ಡಾ. ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ರವರ ಪ್ರಸ್ತಾವನೆ ಸಂಖ್ಯೆ:ಅಂಅನಿನಿ/ಸಮನ್ವಯ/ಇ-225816/2025-26/1709 ದಿನಾಂಕ:03.07.2025.

*****

**ಪ್ರಸ್ತಾವನೆ:-**

ಓದಲಾದ ಕ್ರಮಾಂಕ (1)ರಲ್ಲಿನ ಆದೇಶದಲ್ಲಿ ಪರಿಶಿಷ್ಟ ಜಾತಿ ಮಹಿಳೆಯರ ಆರ್ಥಿಕ ಸ್ವಾವಲಂಬನೆ ಮತ್ತು ಸಬಲೀಕರಣ ಉದ್ದೇಶಕ್ಕಾಗಿ "ಮೈಕ್ರೊ ಕ್ರೆಡಿಟ್ (ಪ್ರೇರಣಾ) ಯೋಜನೆಯನ್ನು" ಅನುಷ್ಠಾನಗೊಳಿಸಲಾಗುತ್ತಿದ್ದು, ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ಪರಿಶಿಷ್ಟ ಜಾತಿ ನಿರುದ್ಯೋಗಿ ಮಹಿಳೆಯರಿಗೆ ಗುಂಪು ಚಟುವಟಿಕೆಗಳ ಮೂಲಕ ಉತ್ಪಾದನಾ ಚಟುವಟಿಕೆಗಳನ್ನು ಆರಂಭಿಸಿ ಲಾಭಗಳಿಸಲು ಸ್ವಯಂ ಉದ್ಯೋಗ ಘಟಕಗಳನ್ನು ಆರಂಭಿಸಲು ಕನಿಷ್ಟ 10 ಸದಸ್ಯರಿರುವ ಮಹಿಳಾ ಸ್ವ-ಸಹಾಯ ಸಂಘಕ್ಕೆ ರೂ.2.50ಲಕ್ಷಗಳ ಘಟಕ ವೆಚ್ಚದಲ್ಲಿ ಸಹಾಯಧನ ಮತ್ತು ಸಾಲವನ್ನು ಮಂಜೂರು ಮಾಡಲಾಗುತ್ತಿತ್ತು.

ಪ್ರಸ್ತುತ ಸರ್ಕಾರದ ಆದೇಶ ಸಂಖ್ಯೆ: ಸಕಇ 151 ಎಸ್‌ಡಿಸಿ 2025 ಬೆಂಗಳೂರು ದಿನಾಂಕ:16.06.2025ರಲ್ಲಿ ಮೈಕ್ರೋ ಕ್ರೆಡಿಟ್ ಯೋಜನೆಯಡಿ ಈಗ ನೀಡಲಾಗುತ್ತಿರುವ ಸಾಲ ಸಹಾಯದನವನ್ನು ಪರಿಷ್ಕರಿಸಿ, ಒಬ್ಬ ಮಹಿಳಾ ಸದಸ್ಯರಿಗೆ ಸಾಲವನ್ನು ರೂ.10.000/- ಗಳಿಂದ ರೂ.25.000/-ಗಳಿಗೆ ಮತ್ತು ಸಹಾಯಧನವನ್ನು ರೂ.15.000/-ಗಳಿಂದ ರೂ.25.000/-ಗಳಿಗೆ ಹೆಚ್ಚಿಸಿ ಆದೇಶಿಸಲಾಗಿರುತ್ತದೆ. ಅರ್ಹ ಮಹಿಳಾ ಸ್ವ-ಸಹಾಯ ಸಂಘಗಳ ಅರ್ಜಿಗಳನ್ನು ಆಹ್ವಾನಿಸಿ, ಮಾನ್ಯ ಶಾಸಕರುಗಳ ಅಧ್ಯಕ್ಷತೆಯಲ್ಲಿರುವ ವಿಧಾನಸಭಾ ಕ್ಷೇತ್ರವಾರು ಮಹಿಳಾ ಸ್ವ-ಸಹಾಯ ಸಂಘಗಳನ್ನು ಆಯ್ಕೆ ಸಮಿತಿಯಲ್ಲಿ ಮಂಡಿಸಿ ಅರ್ಹ ಮಹಿಳಾ ಸ್ವ-ಸಹಾಯ ಸಂಘಗಳನ್ನು ಆಯ್ಕೆ ಮಾಡಲಾಗುತ್ತಿದೆ.

S.V
18/08/2025

ಮಹಿಳಾ ಸ್ವ-ಸಹಾಯ ಸಂಘದ ಪ್ರತಿ ಸದಸ್ಯರಿಗೆ ಅನುದಾನವನ್ನು ಎರಡು ಸಮ ಕಂತುಗಳಲ್ಲಿ ನೀಡಲಾಗುವುದು. ಸದರಿ ವಿಧಾನ ವಿವೇಚನಾ ಕೋಟಾದಲ್ಲಿ ಮತ್ತು ಮಹಿಳಾ ಸ್ವ-ಸಹಾಯ ಸಂಘಗಳ ಆಯ್ಕೆ ಸಮಿತಿಯಿಂದ ಆಯ್ಕೆಯಾದ ಎಲ್ಲಾ ಮಹಿಳಾ ಸ್ವ-ಸಹಾಯ ಸಂಘದ ಸದಸ್ಯರುಗಳಿಗೆ ಅನ್ವಯಿಸುತ್ತದೆ.

ಆಯ್ಕೆಯಾದ ಮಹಿಳಾ ಸ್ವ-ಸಹಾಯ ಸಂಘಗಳ ಸದಸ್ಯರುಗಳಿಗೆ ಈ ಹಿಂದೆ ಬ್ಯಾಂಕ್‌ಗಳ ಮುಖಾಂತರ ಸ್ವ-ಸಹಾಯ ಸಂಘದ ಬ್ಯಾಂಕ್ ಉಳಿತಾಯ ಖಾತೆಗಳಿಗೆ DBT ಮುಖಾಂತರ ಹಣವನ್ನು ಪಾವತಿಸಲಾಗುತ್ತಿತ್ತು. ಆದರೆ, ಆರ್ಥಿಕ ಇಲಾಖೆಯ ನಿರ್ದೇಶನಗಳಂತೆ ನಿಗಮಗಳ ಬ್ಯಾಂಕ್ ಖಾತೆಗಳನ್ನು ಮುಕ್ತಾಯಗೊಳಿಸಲಾಗಿದೆ ಪ್ರಸ್ತುತ ಎಲ್ಲಾ ಮಹಿಳಾ ಸ್ವ-ಸಹಾಯ ಸಂಘದ ಸದಸ್ಯರುಗಳಿಗೆ ಖಜಾನೆಯ ಪಿ.ಡಿ ಖಾತೆ ಮುಖಾಂತರ ನಿಗಮದ ಕೇಂದ್ರ ಕಛೇರಿಯಿಂದ ಹಣ ಬಿಡುಗಡೆ ಮಾಡಲಾಗುತ್ತಿದ್ದು, ಈ ಪದ್ಧತಿ ವಿಳಂಬವಾಗುತ್ತಿರುವುದರಿಂದ ಜಿಲ್ಲಾ ಮಟ್ಟದಲ್ಲಿ ಮಹಿಳಾ ಸ್ವ-ಸಹಾಯ ಸಂಘಗಳ ಬ್ಯಾಂಕ್ ಉಳಿತಾಯ ಖಾತೆಗೆ DBT ಮುಖಾಂತರ ಪಾವತಿ ಮಾಡಲು ಆರ್ಥಿಕ ಇಲಾಖೆಯ ಸಹಮತಿ ಕೋರಲಾಗಿದ್ದು, ಜಿಲ್ಲಾ ಮಟ್ಟದಲ್ಲಿ State-PFMSಗೆ ಲಿಂಕ್ ಮಾಡಿ ರಾಜ್ಯ PFMS ಮೂಲಕ ಜಿಲ್ಲೆಗಳಲ್ಲಿ ಜಿಲ್ಲಾ ವ್ಯವಸ್ಥಾಪಕರುಗಳಿಗೆ Non-Treasury DDO Code ಗಳನ್ನು ನೀಡಿ ವೆಚ್ಚ ಭರಿಸಲು ಸರ್ಕಾರವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: SWD/231/SDC/2025 ಬೆಂಗಳೂರು,**
**ದಿನಾಂಕ: 18.08.2025**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸಲಾಗುತ್ತಿರುವ ಮೈಕ್ರೋ ಕ್ರೆಡಿಟ್ ಪ್ರೇರಣಾ ಯೋಜನೆಗೆ ಸಂಬಂಧಿಸಿದಂತೆ ನಿಗಮವು ತಮ್ಮ ಬ್ಯಾಂಕ್ ಖಾತೆಯನ್ನು State-PFMSಗೆ ಲಿಂಕ್ ಮಾಡಿ. State-PFMS ಮೂಲಕ ಜಿಲ್ಲೆಗಳಲ್ಲಿ ಜಿಲ್ಲಾ ವ್ಯವಸ್ಥಾಪಕರುಗಳಿಗೆ Non-Treasury DDO Codeಗಳನ್ನು ನೀಡಿ ಮಹಿಳಾ ಸ್ವ-ಸಹಾಯ ಸಂಘದ ಸದಸ್ಯರುಗಳಿಗೆ ಈ ಕೆಳಕಂಡ ಮಾರ್ಗಸೂಚಿಗಳಂತೆ ವೆಚ್ಚ ಭರಿಸಿ, ಯೋಜನೆಯನ್ನು ಅನುಷ್ಠಾನಗೊಳಿಸಲು ಆದೇಶಿಸಲಾಗಿದೆ.

**<u>ಅನುಷ್ಠಾನದ ವಿಧಿ ವಿಧಾನಗಳು:</u>**

1) ನಿಗಮವು ಆಯಾ ಆರ್ಥಿಕ ವರ್ಷದಲ್ಲಿ ನಿಗಮಕ್ಕೆ ಒದಗಿಸಲಾಗಿರುವ ಅನುದಾನದಲ್ಲಿ ವಿಧಾನಸಭಾ ಕ್ಷೇತ್ರವಾರು ಗುರಿಗಳನ್ನು ನಿಗಧಿಪಡಿಸತಕ್ಕದ್ದು.
2) ಮೈಕ್ರೋ ಕ್ರೆಡಿಟ್ ಪ್ರೇರಣಾ ಯೋಜನೆಯಡಿ ಆರ್ಥಿಕ ವರ್ಷದ ಪ್ರಾರಂಭದಲ್ಲಿ ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಿ, ಸೇವಾಸಿಂಧು ಪೋರ್ಟಲ್ ಮುಖಾಂತರ ಸ್ವೀಕರಿಸುವುದು.
3) ಸ್ವೀಕೃತವಾದ ಅರ್ಜಿಗಳನ್ನು ಪರಿಶೀಲಿಸಿ, ಅರ್ಹ ಅರ್ಜಿಗಳನ್ನು ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿರುವ ಆಯ್ಕೆ ಸಮಿತಿಗೆ ಮಂಡಿಸಿ ವಿಧಾನ ಸಭಾಕ್ಷೇತ್ರವಾರು ನಿಗದಿಪಡಿಸಲಾಗುವ ಗುರಿಗೆ ತಕ್ಕಂತೆ ಅರ್ಹ ಮಹಿಳಾ ಸ್ವ-ಸಹಾಯ ಸಂಘಗಳನ್ನು ಸಾಲ ಸೌಲಭ್ಯ ಪಡೆಯಲು ಆಯ್ಕೆ ಮಾಡುವುದು.

S.V
18/08/2025

4) ಸ್ವೀಕೃತವಾದ ಅರ್ಜಿಗಳ ಪೈಕಿ, ಆಯ್ಕೆಯಾದ ಮಹಿಳಾ ಸ್ವ-ಸಹಾಯ ಸಂಘಗಳನ್ನು ಮಾತ್ರ ಪ್ರತ್ಯೇಕವಾಗಿ ಸಂಬಂಧಪಟ್ಟ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು, ಕಲ್ಯಾಣ ತಂತ್ರಾಂಶದ ಮೂಲಕ, DBT(NPCI) ID Validation ಮಾಡಲು ಕ್ರಮವಹಿಸುವುದು.
5) ID Validation ಪೂರ್ಣಗೊಂಡ ನಂತರ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ಮಹಿಳಾ ಸ್ವ-ಸಹಾಯ ಸಂಘಗಳ ವಿಳಾಸಕ್ಕೆ ಬೇಟಿ ನೀಡಿ ಪರಿಶೀಲನೆ ನಡೆಸಿ, GEO-TAGGING ಫೋಟೋ ತೆಗೆದು ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡುವುದು.
6) ತದನಂತರ, ಆಯ್ಕೆಯಾದ ಮಹಿಳಾ ಸ್ವ-ಸಹಾಯ ಸಂಘಗಳ ಅರ್ಜಿಯೊಂದಿಗೆ ಸಲ್ಲಿಸಲಾಗಿರುವ ದಾಖಲಾತಿಗಳನ್ನು ಕೇಂದ್ರ ಕಛೇರಿಯಿಂದ ನಿಗದಿಪಡಿಸಿರುವ ನಮೂನೆ-ಚೆಕ್‌ಲಿಸ್ಟ್ ಸ್ಥಳ ಪರಿಶೀಲನಾ ವರದಿಯ ನಮೂನೆಗಳಂತೆ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ಪರಿಶೀಲನಾ ಪ್ರಕ್ರಿಯೆ ಪೂರ್ಣಗೊಂಡ ನಂತರ ಎಲ್ಲಾ ಅರ್ಜಿಗಳನ್ನು ಗರಿಷ್ಟ 20 ದಿನಗಳೊಳಗೆ ಸಂಬಂಧಪಟ್ಟ ಜಿಲ್ಲಾ ವ್ಯವಸ್ಥಾಪಕರ ಲಾಗಿನ್‌ಗೆ ಹಣ ಬಿಡುಗಡೆಗೆ upload ಮಾಡುವುದು. ನಂತರ ಜಿಲ್ಲಾ ವ್ಯವಸ್ಥಾಪಕರು 5 ದಿನಗಳೊಳಗೆ ಮುಂದಿನ ಹಂತಕ್ಕೆ upload ಮಾಡುವುದು.
7) ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು, ಯಾವುದೇ ಅರ್ಜಿಗಳನ್ನು 20 ದಿನಗಳ ನಿಗಧಿತ ಅವಧಿಯೊಳಗೆ ಜಿಲ್ಲಾ ವ್ಯವಸ್ಥಾಪಕರ ಲಾಗಿನ್‌ಗೆ ಹಣ ಬಿಡುಗಡೆಗೆ ಸಲ್ಲಿಸದೇ ಇದ್ದಲ್ಲಿ 05 ದಿನಗಳ ಗ್ರೇಸ್ ಅವಧಿ ನಿಗದಿಪಡಿಸಿ, ಸದರಿ ಗ್ರೇಸ್ ಅವಧಿಯೊಳಗೂ ಸಹ ಅರ್ಜಿಗಳು upload ಆಗದಿದ್ದಲ್ಲಿ ಜಿಲ್ಲಾ ವ್ಯವಸ್ಥಾಪಕರಿಂದ ಸೂಕ್ತ ಕಾರಣ ಕೇಳಿ ನೋಟೀಸ್ ತಂತ್ರಾಂಶದ ಮುಖಾಂತರವೇ ಜಾರಿಗೊಳಿಸಲು ಕ್ರಮವಹಿಸುವುದು.
8) ಗ್ರೇಸ್ ಅವಧಿಯೊಳಗೆ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು, ಪ್ರಕರಣಗಳನ್ನು upload ಮಾಡದೇ ಇದ್ದಲ್ಲಿ ಸದರಿ ಪ್ರಕರಣಗಳು ಸಂಬಂಧಿಸಿದ ಜಿಲ್ಲಾ ವ್ಯವಸ್ಥಾಪಕರುಗಳ ಲಾಗಿನ್‌ಗೆ ಸ್ವಯಂ ಚಾಲಿತವಾಗಿ ಸಲ್ಲಿಕೆಯಾಗಿ ಸದರಿ ಪ್ರಕರಣಗಳನ್ನು ತಕ್ಷಣವೇ ಜಿಲ್ಲಾ ವ್ಯವಸ್ಥಾಪಕರು ಖುದ್ದು ಸ್ಥಳ ಪರಿಶೀಲನೆ ಮತ್ತು ದಾಖಲಾತಿಗಳನ್ನು ಪರಿಶೀಲಿಸಿ 5 ದಿನಗಳೊಳಗೆ ಮುಂದಿನ ಹಂತಕ್ಕೆ upload ಮಾಡತಕ್ಕದ್ದು.
9) ಒಟ್ಟಾರೆ ಜಿಲ್ಲಾ ವ್ಯವಸ್ಥಾಪಕರಿಂದ upload ಮಾಡಿದ ಪ್ರಕರಣಗಳ ಪೈಕಿ Random ಆಗಿ ಶೇಕಡ 20% ರಷ್ಟು ಪ್ರಕರಣಗಳು ವಿಭಾಗ ಮಟ್ಟದ ಉಪ ಪ್ರಧಾನ ವ್ಯವಸ್ಥಾಪಕರುಗಳು ಹಾಗೂ ಶೇಕಡ 10 ರಷ್ಟು ಪ್ರಕರಣಗಳು ಕೇಂದ್ರ ಕಛೇರಿಯ ಪ್ರಧಾನ ವ್ಯವಸ್ಥಾಪಕರುಗಳ ಲಾಗಿನ್‌ಗಳಿಗೆ ಮರು ಪರಿಶೀಲನೆಗೆ ಸ್ವಯಂ ಚಾಲಿತವಾಗಿ ಸಲ್ಲಿಕೆಯಾಗುವಂತೆ ಕ್ರಮವಹಿಸುವುದು. ಉಳಿದ ಶೇ.70% ರಷ್ಟು ಪ್ರಕರಣಗಳು ನೇರವಾಗಿ DBT ತಂತ್ರಾಂಶದ ಅನುಮೋದನೆಗೆ ಸಲ್ಲಿಕೆಯಾಗುವಂತೆ ಕ್ರಮವಹಿಸುವುದು.
10) ಜಿಲ್ಲಾ ವ್ಯವಸ್ಥಾಪಕರುಗಳ ಮೂಲಕ ವಿಭಾಗ ಮಟ್ಟದ ಉಪ ಪ್ರಧಾನ ವ್ಯವಸ್ಥಾಪಕರುಗಳು ಹಾಗೂ ಕೇಂದ್ರ ಕಛೇರಿಯ ಪ್ರಧಾನ ವ್ಯವಸ್ಥಾಪಕರುಗಳ ಲಾಗಿನ್‌ಗಳಿಗೆ upload ಆಗಿ ಸ್ವೀಕೃತವಾದ ಪ್ರಕರಣಗಳನ್ನು ಪರಿಶೀಲಿಸುವುದು, ಅಗತ್ಯವಿದ್ದಲ್ಲಿ ಖುದ್ದು ಸ್ಥಳ ಪರಿಶೀಲನೆ ನಡೆಸಿ, ಯಾವುದೇ ನ್ಯೂನ್ಯತೆಗಳು ಕಂಡು ಬಂದಲ್ಲಿ ಸ್ಪಷ್ಟವಾದ ವರದಿಯೊಂದಿಗೆ ಜಿಲ್ಲಾ ವ್ಯವಸ್ಥಾಪಕರುಗಳ ಲಾಗಿನ್‌ಗಳಿಗೆ ಹಿಂತಿರುಗಿಸುವುದು. ಅದರಂತೆ ನ್ಯೂನತೆಗಳನ್ನು ಸರಿಪಡಿಸಿ, ಜಿಲ್ಲಾ ವ್ಯವಸ್ಥಾಪಕರುಗಳು ಮುಂದಿನ ಹಂತಕ್ಕೆ upload ಮಾಡುವುದು.
11) ನಿಗದಿತ ಅವಧಿಯೊಳಗೆ ಜಿಲ್ಲಾ ವ್ಯವಸ್ಥಾಪಕರು DBT ತಂತ್ರಾಂಶಕ್ಕೆ ಹಣ ಬಿಡುಗಡೆಗೆ ಪ್ರಕರಣಗಳನ್ನು upload ಮಾಡದಿದ್ದಲ್ಲಿ ವ್ಯವಸ್ಥಾಪಕ ನಿರ್ದೇಶಕರ ಲಾಗಿನ್‌ಗೆ Alert Notification ಬರುತ್ತದೆ. ನಂತರ 05 ದಿನಗಳ ಗ್ರೇಸ್ ಅವಧಿ ನಿಗದಿಪಡಿಸುವುದು. ಗ್ರೇಸ್ ಅವಧಿಯೊಳಗೂ upload ಮಾಡದೇ ಇದಲ್ಲಿ ಅಂತಹ ಪ್ರಕರಣಗಳಿಗೆ ವಿಭಾಗಮಟ್ಟದ ಉಪ ಪ್ರಧಾನ ವ್ಯವಸ್ಥಾಪಕರುಗಳಿಂದ ಜಿಲ್ಲಾ ವ್ಯವಸ್ಥಾಪಕರುಗಳಿಗೆ ಸೂಕ್ತ ಕಾರಣ ಕೇಳಿ ನೋಟೀಸ್‌ನ್ನು ತಂತ್ರಾಂಶದ ಮುಖಾಂತರವೇ ಜಾರಿಗೊಳಿಸುವಂತೆ ಕ್ರಮವಹಿಸುವುದು.

S.V
18/08/2025

12) ರೀತಿ ನಿಗದಿತ ಅವಧಿಯೊಳಗೆ ವಿಭಾಗಮಟ್ಟದ ಉಪ ಪ್ರಧಾನ ವ್ಯವಸ್ಥಾಪಕರುಗಳು/ಪ್ರಧಾನ ವ್ಯವಸ್ಥಾಪಕರುಗಳು DBT ತಂತ್ರಾಂಶಕ್ಕೆ ಹಣ ಬಿಡುಗಡೆಗೆ ಪ್ರಕರಣಗಳನ್ನು upload ಮಾಡದಿದ್ದಲ್ಲಿ ವ್ಯವಸ್ಥಾಪಕ ನಿರ್ದೇಶಕರ ಲಾಗಿನ್‌ಗೆ Alert Notification ಬರುತ್ತದೆ. ನಂತರ 05 ದಿನಗಳ ಗ್ರೇಸ್ ಅವಧಿ ನಿಗದಿಪಡಿಸುವುದು. ಗ್ರೇಸ್ ಅವಧಿಯೊಳಗೂ upload ಮಾಡದೇ ಇದಲ್ಲಿ ಅಂತಹ ಪ್ರಕರಣಗಳಿಗೆ ವ್ಯವಸ್ಥಾಪಕ ನಿರ್ದೇಶಕರಿಂದ ಸಂಬಂಧಪಟ್ಟ ವಿಭಾಗಮಟ್ಟದ ಉಪ ಪ್ರಧಾನ ವ್ಯವಸ್ಥಾಪಕರುಗಳು/ಪ್ರಧಾನ ವ್ಯವಸ್ಥಾಪಕರುಗಳಿಗೆ ಸೂಕ್ತ ಕಾರಣ ಕೇಳಿ ನೋಟೀಸ್‌ನ್ನು ತಂತ್ರಾಂಶದ ಮುಖಾಂತರವೇ ಜಾರಿಗೊಳಿಸತಕ್ಕದ್ದು.

13) ಹಣ ಪಾವತಿಗೆ ಜಿಲ್ಲಾ ವ್ಯವಸ್ಥಾಪಕರುಗಳು/ಉಪ ಪ್ರಧಾನ ವ್ಯವಸ್ಥಾಪಕರುಗಳು/ಪ್ರಧಾನ ವ್ಯವಸ್ಥಾಪಕರುಗಳಿಂದ ಅನುಮೋದನೆಗೊಂಡ ಪ್ರಕರಣಗಳನ್ನು ಜಿಲ್ಲಾ ಹಂತದಲ್ಲಿ ಜಿಲ್ಲಾ ವ್ಯವಸ್ಥಾಪಕರುಗಳು K2 DDO ಲಾಗಿನ್‌ನಲ್ಲಿ ಸಾಲ ಮಂಜೂರಾತಿ ಮಾಡಿದ ಮಹಿಳಾ ಸ್ವ-ಸಹಾಯ ಸಂಘಗಳ ಬ್ಯಾಂಕ್ ಉಳಿತಾಯ ಖಾತೆಗಳಿಗೆ Recipient ID ಮಾಡಿ DBT ತಂತ್ರಾಂಶಕ್ಕೆ Mapping ಮಾಡಿ ತದನಂತರ ಬ್ಯಾಚ್ ಸೃಜಿಸಿ ಮಂಜೂರಾತಿ ಆದೇಶದೊಂದಿಗೆ ಹಣ ಬಿಡುಗಡೆ ಮಾಡಲು DBT ತಂತ್ರಾಂಶಕ್ಕೆ ಅನುಮೋದನೆಯೊಂದಿಗೆ ರವಾನಿಸುವುದು.

14) DBT ತಂತ್ರಾಂಶದಲ್ಲಿ ಅನುಮೋದನೆಗೊಂಡ ನಂತರ ಜಿಲ್ಲಾ ಮಟ್ಟದ ಖಜಾನೆ Non-Treasury DDO Code ಲಾಗಿನ್‌ಗೆ ಪ್ರಕರಣಗಳು ಸ್ವೀಕೃತವಾಗುತ್ತದೆ. ತದನಂತರ ಸ್ವೀಕೃತ ಪ್ರಕರಣಗಳನ್ನು ಟೋಕನ್ ಬಿಲ್ ಸೃಜಿಸಿ, ಸದರಿ ಬಿಲ್‌ಗೆ ಜಿಲ್ಲಾ ವ್ಯವಸ್ಥಾಪಕರ ಅನುಮೋದನೆ ಒಳಗೊಂಡು ಮುಖ್ಯ ಲೆಕ್ಕಾಧಿಕಾರಿಗಳು ಜಿಲ್ಲಾ ಪಂಚಾಯತ್‌ರವರ ಮೇಲುಸಹಿಯೊಂದಿಗೆ (Countersign) ಜಿಲ್ಲಾ ಖಜಾನೆಗೆ ಬಿಲ್‌ನ್ನು ಹಣ ಬಿಡುಗಡೆ ಮಾಡಲು ಸಲ್ಲಿಸುವುದು.

15) ಸದರಿ ಮೈಕ್ರೋ ಕ್ರೆಡಿಟ್ ಪ್ರೇರಣಾ ಯೋಜನೆಯಡಿ ಸರ್ಕಾರದ ಆದೇಶದಂತೆ ಸಹಾಯಧನದ ಮೊತ್ತವನ್ನು ಎರಡು ಸಮಾನ ಕಂತುಗಳಲ್ಲಿ ಬಿಡುಗಡೆ ಮಾಡುವುದು. ಮೊದಲನೇ ಕಂತಿನ ಅನುದಾನವನ್ನು ಬಿಡುಗಡೆ ಮಾಡಿರುವ ಉದ್ದೇಶಕ್ಕೆ ಬಳಕೆಯಾಗಿರುವ ಬಗ್ಗೆ TDO/DM/DGM/GM ಗಳು ಸ್ಥಳ ಪರಿಶೀಲಿಸಿ, 45 ದಿನಗಳೊಳಗೆ ಎರಡನೇ ಕಂತಿನ ಹಣ ಪಾವತಿಗಾಗಿ ಮೇಲ್ಕಂಡಂತೆ ವಿವಿಧ ಹಂತಗಳ ವಿಧಾನದಲ್ಲಿಯೇ ಪ್ರಕರಣಗಳನ್ನು ಹಣ ಬಿಡುಗಡೆಗೆ upload ಮಾಡತಕ್ಕದ್ದು.

16) ನಿಗದಿತ 45 ದಿನಗಳ ಅವಧಿಯೊಳಗೆ ಎರಡನೇ ಕಂತಿನ ಹಣ ಬಿಡುಗಡೆಗೆ ಕ್ರಮವಹಿಸದಿದ್ದಲ್ಲಿ ಈ ಮೇಲೆ ತಿಳಿಸಿರುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ತಂತ್ರಾಂಶದ ಮುಖಾಂತರವೇ ಸೂಕ್ತ ನೋಟೀಸ್ ಜಾರಿಗೊಳಿಸುವುದು.

17) ನಿಯಮಾನುಸಾರ ಎರಡು ಕಂತುಗಳು ಬಿಡುಗಡೆಯಾದ ನಂತರ ಮಹಿಳಾ ಸ್ವ-ಸಹಾಯ ಸಂಘಗಳು ಉದ್ದೇಶಿತ ಘಟಕ ಪ್ರಾರಂಭಿಸಿರುವ ಕುರಿತು ಅಗತ್ಯ ದಾಖಲಾತಿಗಳನ್ನು ಕಲ್ಯಾಣ ತಂತ್ರಾಂಶದಲ್ಲಿ Upload ಮಾಡಿ ಕಡತವನ್ನು ಮುಕ್ತಾಯಗೊಳಿಸತಕ್ಕದ್ದು.

18) TDO/DM/DGM/GM ರವರುಗಳು ಪ್ರಕರಣಗಳಿಗೆ ಸಂಬಂಧಿಸಿದಂತೆ **ಸ್ಪಷ್ಟವಾದ ದಾಖಲಾತಿಗಳು ಮತ್ತು ಸಂಬಂಧಿಸಿದ ಸ್ಥಳ ಪರಿಶೀಲನೆಯ ಗುಣಮಟ್ಟದ ಫೋಟೋಗಳನ್ನು ಕಲ್ಯಾಣ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡುವುದು.** ಮುಂದುವರೆದು ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಲಾಗುವ ಎಲ್ಲಾ ದಾಖಲಾತಿಗಳನ್ನು ಭೌತಿಕವಾಗಿ ಕಡತಗಳಲ್ಲಿ ನಿರ್ವಹಿಸತಕ್ಕದ್ದು.

19) ಜಿಲ್ಲಾ ಕಛೇರಿಗಳಲ್ಲಿ ನಿರ್ವಹಿಸಬೇಕಾಗಿರುವ ವರ್ಷವಾರು, ಯೋಜನಾವಾರು ನಗದು ಪುಸ್ತಕಗಳು, ಯೋಜನೆ/ಸಾಲದ ರಿಜಿಸ್ಟರ್‌ಗಳು ಮುಂತಾದವುಗಳನ್ನು ಕೇಂದ್ರ ಕಛೇರಿಯಿಂದಲೇ ಏಕರೂಪ ನಿರ್ವಹಣೆಗೆ ಒದಗಿಸುವುದು. ಸದರಿ ರಿಜಿಸ್ಟರ್‌ಗಳನ್ನು ಯೋಜನಾವಾರು ಮತ್ತು ವರ್ಷವಾರು ಪ್ರತ್ಯೇಕವಾಗಿ ಜಿಲ್ಲಾ ಕಛೇರಿಗಳಲ್ಲಿ



S.V
18/08/2025

ನಿರ್ವಹಿಸತಕ್ಕದ್ದು, ಮೇಲಾಧಿಕಾರಿಗಳ ತಪಾಸಣೆ ಸಂದರ್ಭದಲ್ಲಿ ಸದರಿ ಮಾಹಿತಿಗಳನ್ನು ಒದಗಿಸತಕ್ಕದ್ದು.

20) ಪ್ರತಿ ಮಾಹೆಯ ಅಂತ್ಯದಲ್ಲಿ ಲೆಕ್ಕ ಸಮನ್ವಯಗೊಳಿಸುವುದು ಜಿಲ್ಲಾ ವ್ಯವಸ್ಥಾಪಕರುಗಳ ಜವಾಬ್ದಾರಿ. ಮುಂದುವರೆದಂತೆ, ಪ್ರತಿ ಮೂರು ತಿಂಗಳಲ್ಲಿ ಉಪ ಪ್ರಧಾನ ವ್ಯವಸ್ಥಾಪಕರು ಮತ್ತು ಪ್ರತಿ ಆರು ತಿಂಗಳಿಗೊಮ್ಮೆ ಕೇಂದ್ರ ಕಛೇರಿಯ ಪ್ರಧಾನ ವ್ಯವಸ್ಥಾಪಕರುಗಳು ಜಿಲ್ಲಾ ಕಛೇರಿಗೆ ಭೇಟಿ ನೀಡಿ ಸದರಿ ಎಲ್ಲಾ ವಿವರಗಳನ್ನು ಪರಿಶೀಲಿಸಿ ಲೆಕ್ಕ ಸಮನ್ವಯಗೊಳಿಸುವುದು.

21) ಜಿಲ್ಲಾ ಹಂತದಲ್ಲಿ ಖಜಾನೆ-2 ಮುಖಾಂತರ ಹಣ ಪಾವತಿಗೆ ಸಂಬಂಧಿಸಿದಂತೆ ಮಾರ್ಗಸೂಚಿ /ನಿರ್ದೇಶನಗಳನ್ನು ನಿಗಮದ ವ್ಯವಸ್ಥಾಪಕ ನಿರ್ದೇಶಕರು ಜಾರಿಗೊಳಿಸುವುದು.

22) ಲೆಕ್ಕ ಸಮನ್ವಯಗೊಳಿಸುವ ಪ್ರಕ್ರಿಯೆಯಲ್ಲಿ ಜಿಲ್ಲೆಗಳಲ್ಲಿ ಹಣದ ವಹಿವಾಟು ತಾಳೆಯಾಗದಿದ್ದಲ್ಲಿ ಅಥವಾ ಹಣ ದುರುಪಯೋಗ/ನಿಯಮಗಳ ಉಲ್ಲಂಘನೆ ಕಂಡುಬಂದಲ್ಲಿ ತಕ್ಷಣವೇ ಅಂತಹ ಜಿಲ್ಲೆಗಳಿಗೆ ಬಿಡುಗಡೆಯಾಗಿರುವ ಅನುದಾನವನ್ನು ಹಿಂಪಡೆಯಲಾಗುವುದು. ಮತ್ತು ಮುಂದಿನ ಹಂತದ ಹಣ ಬಿಡುಗಡೆ ಸ್ಥಗಿತಗೊಳಿಸಲಾಗುವುದು, ಮುಂದುವರೆದು ಸಂಬಂಧಿಸಿದ ಅಧಿಕಾರಿಗಳ/ಸಿಬ್ಬಂದಿಗಳ ವಿರುದ್ಧ ಕಾನೂನು ರೀತ್ಯ ಶಿಸ್ತು ಕ್ರಮ ಜರುಗಿಸುವುದು.

23) ಮೇಲ್ಕಂಡಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಿದ ಪ್ರಕರಣಗಳಲ್ಲಿ ಸಮಜಾಯಷಿಗಳು ಸಮರ್ಥನೆಯಾಗದೇ ಪುನರಾವರ್ತನೆಯಾದ ಪ್ರಕರಣಗಳಲ್ಲಿ ನಿಯಮಾನುಸಾರ ಇಲಾಖಾ ವಿಚಾರಣೆ ನಡೆಸಿ, ಅಗತ್ಯ ಶಿಸ್ತು ಕ್ರಮ ಜರುಗಿಸುವುದು.

ಮೇಲ್ಕಂಡ ಎಲ್ಲಾ ವಿಧಿವಿಧಾನಗಳನ್ನು ತಪ್ಪದೇ ಪಾಲಿಸಿ, ಮೈಕ್ರೋ ಕ್ರೆಡಿಟ್ ಪ್ರೇರಣಾ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ನಿಗಮದ ವ್ಯವಸ್ಥಾಪಕ ನಿರ್ದೇಶಕರು ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ/1/TPF/2025, ದಿನಾಂಕ: 02.04.2025ರಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ ನೀಡಿರುವ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

S.V 18/08/2025

(ಎಸ್.ವಿ. ಕಲಾವತಿ)
ಸರ್ಕಾರದ ಜಂಟಿ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

**ಇವರಿಗೆ:-**

1. ಮಹಾಲೇಖಪಾಲರು, (ಎ & ಇ ಲೆಕ್ಕಪರಿಶೋಧನೆ-1 ಮತ್ತು 2), ಕರ್ನಾಟಕ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು.

3. ಪ್ರಧಾನ ವ್ಯವಸ್ಥಾಪಕರು, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು.
4. ಎಲ್ಲಾ ವಿಭಾಗ ಮಟ್ಟದ ಉಪ ಪ್ರಧಾನ ವ್ಯವಸ್ಥಾಪಕರುಗಳು.
5. ಎಲ್ಲಾ ಜಿಲ್ಲಾ ವ್ಯವಸ್ಥಾಪಕ ನಿರ್ದೇಶಕರುಗಳು, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ.
6. ಎಲ್ಲಾ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು.
7. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.

**<u>ಪ್ರತಿಗಳು:-</u>**

1. ಮಾನ್ಯ ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ.